ದಿನಾಂಕ 14.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:-** ವಾದಿ ಪರ ಶ್ರೀ.ಪಿ.ಬಿ.ಎಂ ವಕೀಲ **ರಿಂದ**

ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಸಂಗತಿಗಳು ಸತ್ಯವಾಗಿರುತ್ತವೆ. ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಈ ದಾವೆಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. ಕೆ ಆರ್ ಪೇಟೆ ತಾಲ್ಲೂಕು, ಕಿಕ್ಕೇರಿ ಹೋಬಳಿ, ಚಿನ್ನೇನಹಳ್ಳಿ ಗ್ರಾಮದ ಸರ್ವೇ ನಂಬರ್ 11/2 ರ 2022-23 ನೇ ಸಾಲಿನ ಪಹಣಿಯನ್ನು ನಿಪಿ-1 ಎಂದು,

2. ಕೆ ಆರ್ ಪೇಟೆ ತಾಲ್ಲೂಕು, ಕಿಕ್ಕೇರಿ ಹೋಬಳಿ, ಚಿನ್ನೇನಹಳ್ಳಿ ಗ್ರಾಮದ ಸರ್ವೇ ನಂಬರ್ 15/2 ಪೈಪಿ-2 ರ ಕೈ ಬರವಣಿಗೆಯ ಪಹಣಿಯ ಧೃಢೀಕೃತ ಪ್ರತಿಯನ್ನು ನಿಪಿ-2 ಎಂದು,

3. ಕೆ ಆರ್ ಪೇಟೆ ತಾಲ್ಲೂಕು, ಕಿಕ್ಕೇರಿ ಹೋಬಳಿ, ಚಿನ್ನೇನಹಳ್ಳಿ ಗ್ರಾಮದ ಸರ್ವೇ ನಂಬರ್ 10/11 ರ ಕೈ ಬರವಣಿಗೆಯ ಪಹಣಿಯ ಧೃಢೀಕೃತ ಪ್ರತಿಯನ್ನು ನಿಪಿ-3 ಎಂದು,

4. ಕೆ ಆರ್ ಪೇಟೆ ತಾಲ್ಲೂಕು, ಕಿಕ್ಕೇರಿ ಹೋಬಳಿ, ಚಿನ್ನೇನಹಳ್ಳಿ ಗ್ರಾಮದ ಸರ್ವೇ ನಂಬರ್ 11/2 ಪೈಪಿ-3 ರ ಕೈ ಬರವಣಿಗೆಯ ಪಹಣಿಯ ಧೃಢೀಕೃತ ಪ್ರತಿಯನ್ನು ನಿಪಿ-4 ಎಂದು,

5. ದಿನಾಂಕ 24.06.2022 ರಂದು ಪ್ರತಿವಾದಿಗಳಿಗೆ ನೀಡಿದ ನೋಟೀಸನ್ನು ನಿಪಿ-5 ಎಂದು,

6. ಅಂಚೆ ರಶೀದಿಗಳನ್ನು ನಿಪಿ-6 ರಿಂದ ನಿಪಿ-8 ಎಂದು,

7. ಪ್ರತಿವಾದಿ 2 ಮತ್ತು 3 ರವರಿಗೆ ಜಾರಿಯಾಗದೆ ಹಿಂದುರುಗಿದ ಅಂಚೆ ಲಕೋಟೆಯನ್ನು ನ್ಯಾಯಾಲಯದ ಮುಂದೆ ತೆರೆದು ನೋಡಲಾಗಿ ಅದರಲ್ಲಿರುವ ನೋಟೀಸುಗಳನ್ನು ನಿಪಿ-9 ಮತ್ತು ನಿಪಿ-10 ಎಂದು, ಅಂಚೆ ಲಕೋಟೆಗಳನ್ನು ನಿಪಿ-9 ಎ ಮತ್ತು ನಿಪಿ-10 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ವಾದಿಯು ದಿನಾಂಕ 18.06.2019 ರ ಒಂದು ನೋಂದಾಯಿತವಲ್ಲದ

ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯ ಮೇಲೆ ಮುದ್ರಾಂಕ ಶುಲ್ಕ ಮತ್ತು ದಂಡದ ಮೇಲಿನ ವಾದ ಮಂಡನೆಗಾಗಿ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.